## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 474 (788+789) |
| 2. | ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 10-03-2020. |
| 4. | ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೀದರ್ ಜಿಲ್ಲೆಯ ಒಳಚರಂಡಿ ಮತ್ತು 24x7 ನೀರು ಸರಬರಾಜು ಯೋಜನೆ ಕಾಮಗಾರಿಗಾಗಿ ಡಾಂಬರೀಕರಣ ಮತ್ತು ಸಿ.ಸಿ ರಸ್ತೆಗಳನ್ನು ಅಗೆದು ದುರಸ್ತಿ ಮಾಡದೆ ಹಾಗೆಯೇ ಬಿಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ? | **ಕೆ.ಯು.ಐ.ಡಿ.ಎಫ್.ಸಿ ಉತ್ತರ:** ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ ವತಿಯಿಂದ ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಬೀದರ್ ನಗರದಲ್ಲಿ ಒಳಚರಂಡಿ ರಸ್ತೆ ದುರಸ್ತಿ ಕಾಮಗಾರಿ ವಿಳಂಬವಾದ ಕಾರಣ ಜುಲೈ 2017 ರಲ್ಲಿ ಒಳಚರಂಡಿ ಕಾಮಗಾರಿಯಡಿ ಕತ್ತರಿಸಿದ ರಸ್ತೆ ಪುನರ್‌ನಿರ್ಮಾಣ ಕಾಮಗಾರಿಯನ್ನು ಸ್ಥಳೀಯ ಸಂಸ್ಥೆ ವತಿಯಿಂದ ಕೈಗೊಳ್ಳಲು ಅಂದಿನ ಪೌರಾಡಳಿತ ಸಚಿವರ ಸೂಚನೆ ಮೇರೆಗೆ ಒಳಚರಂಡಿ ಗುತ್ತಿಗೆ ಕರಾರಿನಲ್ಲಿ ರಸ್ತೆ ದುರಸ್ತಿಗೆ ಬಾಕಿ ಲಭ್ಯವಿದ್ದ ಮೊತ್ತವನ್ನು ಬೀದರ್ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಸ್ಥಳೀಯ ಸಂಸ್ಥೆಯವರು ಸದರಿ ಮೊತ್ತದಲ್ಲಿ ರಸ್ತೆಯನ್ನು ಪುನರ್ ನಿರ್ಮಾಣ ಮಾಡಿರುತ್ತಾರೆ.<br><br>24/7 ನೀರು ಸರಬರಾಜು ಕಾಮಗಾರಿಯಡಿ ಕತ್ತರಿಸಿದ ರಸ್ತೆಯನ್ನು ಗುತ್ತಿಗೆದಾರರಿಂದಲೇ ಪುನರ್ ನಿರ್ಮಾಣ ಮಾಡಲಾಗಿದೆ. ಈ ಕಾಮಗಾರಿ 2017 ರಲ್ಲಿ ಮುಕ್ತಾಯವಾಗಿರುತ್ತದೆ. 24/7 ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯಡಿ ದುರಸ್ತಿಪಡಿಸದ ರಸ್ತೆಗಳು ಬಳಸಬಹುದಾದ ಸ್ಥಿತಿಯಲ್ಲಿದೆ.<br><br>**ಕೆ.ಯು.ಡಬ್ಲ್ಯೂ.ಎಸ್.&ಡಿ.ಬಿ ಉತ್ತರ:** ಕ.ನ.ನೀ.ಸ ಮತ್ತು ಒಚ ಮಂಡಳಿ ವತಿಯಿಂದ ಬೀದರ್ ನಗರದ ವಲಯ-2 ಮತ್ತು 3 ರಲ್ಲಿ ಒಳಚರಂಡಿ ಕೊಳವೆ ಮಾರ್ಗಗಳನ್ನು ಕೇಂದ್ರ ಪುರಸ್ಕೃತ "ಅಮೃತ್" ಯೋಜನೆಯಡಿ ಕೈಗೊಳ್ಳಲಾಗಿರುತ್ತದೆ. ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕೊಳವೆ ಮಾರ್ಗ ಅಳವಡಿಸಿದ ರಸ್ತೆಗಳಲ್ಲಿ 26.48 ಕಿ.ಮೀ ಉದ್ದದ ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು 21.30 ಕಿ.ಮೀ ಉದ್ದದ ಡಾಂಬರು ರಸ್ತೆ ರಿಪೇರಿ ಕಾಮಗಾರಿಯನ್ನು ಕ.ನ.ನೀ.ಸ ಮತ್ತು ಒಚ ಮಂಡಳಿ ವತಿಯಿಂದ ಕೈಗೊಳ್ಳಲಾಗಿದೆ. ಈ ಯೋಜನೆಯು ಐದು ವರ್ಷಗಳ ದುರಸ್ಥಿ ಮತ್ತು ನಿರ್ವಹಣೆಯು ಕೂಡಾ ಒಳಗೊಂಡಿರುವುದರಿಂದ, ಗುಣಮಟ್ಟದ ಬಗ್ಗೆ ದೂರು ಬಂದಲ್ಲಿ, ಅವುಗಳನ್ನು ಪರಿಶೀಲಿಸಿ ಸರಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| | | ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯು ನಿರ್ವಹಿಸುವ ಒಳಚರಂಡಿ ಕಾಮಗಾರಿಗಳ ಸಂಬಂಧ ಒಳಚರಂಡಿ ಕರಾರು ಒಪ್ಪಂದ ಪ್ರಕಾರ ಕೆಲವು ಭಾಗಗಳಲ್ಲಿ ಅಗೆದ ಡಾಂಬರೀಕರಣ ರಸ್ತೆ ಹಾಗೂ ಸಿಸಿ ರಸ್ತೆಗಳನ್ನು ದುರುಸ್ತಿ ಮಾಡಲಾಗಿರುತ್ತದೆ. ಇನ್ನುಳಿದ ಡಾಂಬರೀಕರಣ ಮತ್ತು ಸಿಸಿ ರಸ್ತೆಗಳ ದುರುಸ್ತಿ ಕಾರ್ಯವನ್ನು ನಿರ್ಮಿತಿ ಕೇಂದ್ರದ ಮುಖಾಂತರ ಕೈಗೊಳ್ಳಲಾಗಿದೆ. |
| ಆ) | ಈ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿದ್ದು, ಜನ ಸಾಮಾನ್ಯರ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | **ಕೆ.ಯು.ಐ.ಡಿ.ಎಫ್.ಸಿ ಉತ್ತರ:** ಗುತ್ತಿಗೆದಾರರು ಕರಾರಿನಂತೆ ಕುಡಿಯುವ ನೀರಿನ ದೈನಂದಿನ ನಿರ್ವಹಣೆ ಮಾಡುತ್ತಿರುತ್ತಾರೆ. ಇತರೆ ಗುತ್ತಿಗೆದಾರರು ಚರಂಡಿ, ಕೇಬಲ್ ಅಳವಡಿಸುವ ಸಮಯಗಳಲ್ಲಿ ನೀರಿನ ಕೊಳವೆಗಳನ್ನು ಹಾಳುಮಾಡಿದ ಕಾರಣ ಸದರಿ ಕೊಳವೆಗಳನ್ನು ದುರಸ್ತಿಪಡಿಸುವಾಗ ಉಂಟಾದ ರಸ್ತೆ ದುರಸ್ತಿ ಕೆಲಸಗಳನ್ನು ಆಗಿಂದಾಗ್ಯೆ ನಿರ್ವಹಿಸಬೇಕಾಗಿರುತ್ತದೆ. ಇದು ನಿರಂತರವಾಗಿ ನಡೆಯುತ್ತಿರುವ ನಿರ್ವಹಣಾ ಕಾರ್ಯದ ಭಾಗವಾಗಿರುತ್ತದೆ.<br><br>**ಕ.ನ.ನೀ.ಸ ಮತ್ತು ಒಚ ಮಂಡಳಿ** ವತಿಯಿಂದ ವಿತರಣ ಜಾಲವನ್ನು 5 ವಲಯಗಳಲ್ಲಿ ಹಾಗೂ ಒಳಚರಂಡಿ ಯೋಜನೆಯ ವಲಯ-2 ಮತ್ತು 3 ಕಾಮಗಾರಿಯ ತಪಾಸಣೆಯನ್ನು ಮೂರನೇ ತಪಾಸಣೆ ಸಂಸ್ಥೆಯಿಂದ ಕೈಗೊಂಡಿದ್ದು ಕಳಪೆ ಗುಣಮಟ್ಟದಿಂದ ಕೂಡಿರುವುದಿಲ್ಲ.<br><br>**ಡಿ.ಎಂ.ಎ ಉತ್ತರ:** ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳು ಗುಣಮಟ್ಟದಿಂದ ಕೂಡಿದ್ದು, ಗುಣಮಟ್ಟ ಪರೀಕ್ಷಿಸಲು ಮೂರನೇ ವ್ಯಕ್ತಿ ತಂಡದವರಿಗೆ ನೇಮಕ ಮಾಡಲಾಗಿರುತ್ತದೆ. Royal Haskoning DHV New Delhi & STEM Consultant Bengaluru ಮೂರನೇ ವ್ಯಕ್ತಿ ತಂಡದವರಿಂದ ಹಂತ ಹಂತವಾಗಿ ಗುಣಮಟ್ಟ ಪರೀಕ್ಷೆ ಮಾಡಲಾಗಿರುತ್ತದೆ. |
| ಇ) | ಬಂದಿದ್ದಲ್ಲಿ, ಆ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಬರದಿದ್ದಲ್ಲಿ, ಇದಕ್ಕೆ ಹೊಣೆಗಾರರು ಯಾರು ? | ಇತರೆ ಗುತ್ತಿಗೆದಾರರು ಚರಂಡಿ, ಕೇಬಲ್ ಅಳವಡಿಸುವ ಸಮಯಗಳಲ್ಲಿ ನೀರಿನ ಕೊಳವೆಗಳನ್ನು ಹಾಳು ಮಾಡಿದ ಕಾರಣ ಸದರಿ ಕೊಳವೆಗಳನ್ನು ದುರಸ್ತಿಪಡಿಸುವಾಗ ಉಂಟಾದ ರಸ್ತೆ ದುರಸ್ತಿ ಕೆಲಸಗಳನ್ನು ಆಗಿಂದಾಗ್ಯೆ ನಿರ್ವಹಿಸಬೇಕಾಗಿರುತ್ತದೆ. ಈ ಸಂಬಂಧ ರಸ್ತೆ ಹಾಳು ಮಾಡಿದ ಇತರೆ ಗುತ್ತಿಗೆದಾರರಿಂದ ಹಣ ವಸೂಲಿ ಮಾಡಲು ಕ್ರಮವಹಿಸುವಂತೆ ನಗರಸಭೆಗೆ ನಿರ್ದೇಶನ ನೀಡಲಾಗಿದೆ. |
| ಈ) | ಇಲ್ಲವಾದಲ್ಲಿ ಜಿಲ್ಲೆಯ ಜನರ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ? | ಸಾರ್ವಜನಿಕರಿಂದ ದೂರು ಬಂದಾಗ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |

ಕಡತ ಸಂಖ್ಯೆ : ನಅಇ 59 ಪಿ.ಆರ್.ಜೆ 2020

( ಬಿ.ಎ.ಬಸವರಾಜ )
ನಗರಾಭಿವೃದ್ಧಿ ಸಚಿವರು.